ಓ. ಎಸ್ . 138/2020 ಪಿ.ಡಬ್ಲ್ಯೂ - 1 ಅಜಿತಕುಮಾರ ಚೌಗಲಾ

**(ದಿನಾಂಕಃ 19-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎ ಎಮ್ ಎಚ್ ವಕೀಲರಿಂದ -**

1. ಸರ್ವೆ ನಂ. 458 ಒಟ್ಟು ಕ್ಷೇತ್ರ 3 ಎಕರೆ 19 ಗುಂಟೆ ಇರುತ್ತದೆ. ಸದರಿ ಜಮೀನಿಗೆ ನನ್ನ ತಂದೆ ಕಾಡಪ್ಪ ಹಾಗೂ ಶಿವಲಿಂಗ ಮಲ್ಲೇಶ ಹಂಚಿನಾಳ ಇವರು ಮಾಲಿಕರು. ಸರ್ವೆ ನಂ. 457 ಕಾಡಪ್ಪ ಪರಪ್ಪ ಚೌಗಲಾ ಇವರದು ಇರುತ್ತದೆ. ಸರ್ವೆ ನಂ. 446 ರ ಜಮೀನು ನಮ್ಮ ಅಣ್ಣ ತಮ್ಮಂದಿರರಿಗೆ ಸೇರಿದ್ದು ಅದರಲ್ಲಿ ಬಹಳಷ್ಟು ಜನ ಇದ್ದಾರೆ . ಸರ್ವೆ ನಂ, 446ರಲ್ಲಿ 2ನೇ ಪ್ರತಿವಾದಿ ಮಹಾವೀರ ಕಾಡಪ್ಪ ಚೌಗಲಾ ಈತನ ಹೆಸರು ಇದೆ ಎಂದರೆ ನಿಜ. ಸರ್ವೆ ನಂ. 446 ರ ಜಮೀನು ಸರ್ವೆ ನಂ. 458 ರ ಪಶ್ಚಿಮಕ್ಕೆ ಇದೆ ಎಂದರೆ ನಿಜ. ಸರ್ವೆ ನಂ. 446 ರ ಜಮೀನು ಮತ್ತು ಸರ್ವೆ ನಂ. 458 ರ ಜಮೀನು ಉತ್ತರ ದಕ್ಷಿಣ ಪಟ್ಟಿ ಇದೆ ಎಂದರೆ ನಿಜ. ಸರ್ವೆ ನಂ. 458 ರ ಲ್ಲಿ 2 ಹಿಸ್ಸೆ ಆಗಿದೆ, ಸರ್ವೆ ನಂ. 458/1 ಹಾಗೂ 458/2 ಎಂದರೆ ನಿಜ. ಸರ್ವೆ ನಂ. 458/1 2ನೇ ಪ್ರತಿವಾದಿ ಮಹಾವೀರ ಕಾಡಪ್ಪ ಚೌಗಲಾ ಇವರ ಹೆಸರಿನಲ್ಲಿದೆ ಎಂದರೆ ನಿಜ. ಸರ್ವೆ ನಂ. 458 ರ ಉತ್ತರ ಬದಿಗೆ ನನ್ನ ಸರ್ವೆ ನಂ. 457 ರ ಜಮೀನು ಇದೆ ಎಂದರೆ ನಿಜ.

2. ಸರ್ವೆ ನಂ. 457, 458, 454 ಹಾಗೂ 446 ರ ವಸ್ತುಸ್ಥಿತಿ ತೋರಿಸಲು ನಾನು ನ್ಯಾಯಾಲಯಕ್ಕೆ ಸರಕಾರಿ ನಕಾಶೆಯನ್ನು ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ಹಾಜರ ಮಾಡಿದ್ದೇನೆ. ಸರಕಾರಿ ನಕಾಶೆಯಲ್ಲಿ 446 ರ ಪಶ್ಚಿಮಕ್ಕೆ ದಾರಿ ತೋರಿಸಲಾಗಿದೆ. ನಿ.ಪಿ-10 ರ ಫೋಟೊದಲ್ಲಿ ಕಾಣತಕ್ಕಂತಹ ದಾರಿ 10 ಫೂಟ ಅಗಲದ ರಸ್ತೆ ಎಂದರೆ ಸಾಕ್ಷಿ ಅದು ಕಾಲುದಾರಿ ಎಂದು ಹೇಳುತ್ತಾರೆ. ನಿ.ಪಿ-10 ರ ಫೋಟೊದಲ್ಲಿ ಕಾಣತಕ್ಕಂತಹ 10 ಫೂಟ ಅಗಲದ ರಸ್ತೆ ಸರ್ವೆ ನಂ. 458 ರ ಪಶ್ಚಿಮಕ್ಕೆ ಇದೆ ಎಂದರೆ ನಿಜ . ಸಾಕ್ಷಿ ಆ ದಾರಿಯಲ್ಲಿ ಟ್ರ್ಯಾಕ್ಟರ ಹೋಗಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ-10 ರ ಫೋಟೊದಲ್ಲಿ 10 ಫೂಟ ಅಗಲದ ದಾರಿ ಕಾಣುತ್ತಿದೆ ಎಂದರೆ ಸಾಕ್ಷಿ ಅದು ಕಾಲುದಾರಿ ಇದ್ದು ಅದು ಕೇವಲ 3 ಅಡಿ ಅಗಲದ ರಸ್ತೆ ಎಂದು ಹೇಳುತ್ತಾರೆ. ಸದರಿ ರಸ್ತೆ ನೇರವಾಗಿ ಉತ್ತರಕ್ಕೆ ಸರ್ವೆ ನಂ. 457 ರ ವರೆಗೆ ಹೋಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸರ್ವೆ ನಂ. 458 ಕ್ಕೆ ಅದು ಕಟ್ಟಾಗುತ್ತದೆ ಎಂದು ಹೇಳುತ್ತಾರೆ. ಸದರಿ ನಿ.ಪಿ-10 ಫೋಟೊದಲ್ಲಿ ಕಾಣುವ ಕೊನೆಯ ಸಾಗವಾನಿ ಗಡದ ತನಕ ಇರತಕ್ಕಂತಹ ಕಬ್ಬು ಸರ್ವೆ ನಂ. 458ರ ಜಮೀನಿನಲ್ಲಿ ಬೆಳೆದ ಕಬ್ಬು ಇದೆ . ಸದರಿ ಗಿಡವನ್ನು ಗುರುತಿಸುವಿಕೆಗಾಗಿ "ಎ" ಎಂದು ಗುರುತು ಕೊಟ್ಟಿದೆ. ಸದರಿ ಚಿತ್ರದಲ್ಲಿ ಕಾಣುವಂತಹ ಮುಂದಿನ ಕಬ್ಬಿಗಿಂತ ಹಿಂದಿನ ಕಬ್ಬು ಪಶ್ಚಿಮ ಬಾಜುಕ್ಕೆ ಹೆಚ್ಚಿ ಗೆ ಬಂದಿದೆ ಎಂದರೆ ಸಾಕ್ಷಿ 3 ಫೂಟು ಹೆಚ್ಚಿಗೆ ಬಂದಿದೆ ಎಂದು ಹೇಳುತ್ತಾರೆ. ಸದರಿ ಚಿತ್ರದಲ್ಲಿ ಕಾಣುವಂತಹ ಕಬ್ಬು ಮುಂದೆ ಇರುವಂತಹ ಕಬ್ಬಿಗಿಂತ 10 ಫೂಟು ಹೆಚ್ಚಿ ಗೆ ಪಶ್ಚಿಮಕ್ಕೆ ಬಂದಿದೆ ಎಂದರೆ ಸರಿಯಲ್ಲ. ನಿ.ಪಿ-10 ಫೋಟೊದಲ್ಲಿ 2 ಟ್ರ್ಯಾಕ್ಟರ ಗಾಲಿಗಳು

ಹಾದದ್ದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿ.ಪಿ-9 ರ ಫೋಟೊ ಸರ್ವೆ ನಂ. 458 ರ ಪೂರ್ವ ಭಾಗದ ಫೋಟೊ ಎಂದರೆ ನಿಜ. ನಿ.ಪಿ-9 ರ ಫೋಟೊದಲ್ಲಿ ಒಂದು ಬಾಂದು ಕಾಣುತ್ತದೆ ಎಂದರೆ ಸಾಕ್ಷಿ ಅದು ಹಾದಿ ಎಂದು ಹೇಳುತ್ತಾರೆ. ನಿ.ಪಿ-9 ರ ಫೋಟೊದಲ್ಲಿ ಕಾಣುವ ಬಾಂದ ಜಮೀನಿಗಿಂತ 3-4 ಫೂಟು ಎತ್ತರದಲ್ಲಿದೆ ಎಂದರೆ ಸರಿಯಲ್ಲ. ನಿ.ಪಿ-9 ಫೋಟೊದಲ್ಲಿ ಕಾಣುವ ಬಾಂದು ನೇರವಾಗಿ ಮುಂದೆ ಇದೆ ಎಂದರೆ ಅದನ್ನು ಹಡ್ಡಿ ಅಲ್ಲಿ ಕಬ್ಬು ಹಚ್ಚಿದ್ದಾಗಿ ಹೇಳುತ್ತಾರೆ . ನಿ.ಪಿ-9 ರಲ್ಲಿ ಯಾವುದೇ ಹಾದಿ ಇಲ್ಲ , ಮೊದಲಿನ ಸ್ಥಿತಿ ಈಗಲೂ ಇದೆ ಎಂದರೆ ಸಾಕ್ಷಿ 2020 ಕ್ಕಿಂತ ಮೊದಲು ಅಲ್ಲಿ ಹಾದಿ ಇತ್ತು ಎಂದು ಹೇಳುತ್ತಾರೆ. 2020 ಕ್ಕಿಂತ ಮೊದಲು ಅಲ್ಲಿ ಹಾದಿ ಇತ್ತು ಎಂದು ತೋರಿಸಲು ಫೋಟೊ ಏನಾದರೂ ಇದೆಯಾ ಎಂದರೆ ಸಾಕ್ಷಿ 2020 ಕ್ಕಿಂತ ಮಾದಲು ಅಲ್ಲಿ ಯಾವುದೇ ವ್ಯಾಜ್ಯ , ತಕರಾರು ಬಂದಿರಲಿಲ್ಲ ಎಂದು ಹೇಳುತ್ತಾರೆ. ನಿ.ಪಿ-7 ರ ಫೋಟೊ ಸರ್ವೆ ನಂ. 458 ರ ಪೂರ್ವ ಬಾಜುವಿನ ಫೋಟೊ ಎಂದರೆ ನಿಜ. ನಿ.ಪಿ-7 ರ ಫೋಟೂದಲ್ಲಿ ಕಾಣುವಂತಹ ಬಾಂದಿನ ಮೇಲೆ ಹುಲ್ಲು ಗಿಡಗಂಟೆಗಳು ಬೆಳೆದಿರುವುದು ಹಾಗೂ ಅದರ ಗುಂಟ ಗಿಡ ಹಚ್ಚಿದ್ದಾರೆ ಎಂದರೆ ಸಾಕ್ಷಿ 2020 ರ ನಂತರ ಹಚ್ಚಿದ ಗಿಡಗಳು ಎಂದು ಹೇಳುತ್ತಾರೆ. ಸದರಿ ನಿ.ಪಿ-7 ರ ಫೋಟೊ ಕೇಸ ಹಾಕುವ ಮುಂಚೆ ಪೋಲಿಸ ಠಾಣೆಗೆ ಹಾಜರ ಮಾಡಲು ತೆಗೆದಿದ್ದು ಇದೆ . ನಿ.ಪಿ-7 ರ ಫೋಟೊದಲ್ಲಿ ಸರ್ವೆ ನಂ. 458 ರಲ್ಲಿ 7-8 ಫೂಟು ಎತ್ತರದ ಕಬ್ಬು ಕಾಣುತ್ತಿದೆ ಎಂದರೆ ಸಾಕ್ಷಿ 4 ಫೂಟು ಎತ್ತರದ ಕಬ್ಬು ಕಾಣುತ್ತಿದೆ ಎಂದು ಹೇಳುತ್ತಾರೆ. ಅಲ್ಲಿ ಹಚ್ಚಿದ ಮಾವಿನ ಗಿಡಗಳು 4-6 ಫೂಟು ಎತ್ತರ ಕಾಣುತ್ತಿವೆ ಎಂದರೆ ನಿಜ. ಸರ್ವೆ ನಂ. 458 ರ ಪೂರ್ವದಲ್ಲಿ ಯಾವುದೇ ದಾರಿ ಇಲ್ಲ ಅಲ್ಲಿ ಒಡ್ಡು ಇದೆ ಎಂದರೆ ಸರಿಯಲ್ಲ. ಸರ್ವೆ ನಂ. 458 ರ ಪೂರ್ವಕ್ಕೆ ಕಾಣುವ ಜಮೀನು 4 ಫೂಟು ಎತ್ತರದಲ್ಲಿದೆ ಎಂದರೆ ಸಾಕ್ಷಿ 3 ಫೂಟು ಎತ್ತರದಲ್ಲಿದೆ ಎಂದು ಹೇಳುತ್ತಾರೆ. ನಿ.ಪಿ-7 ರ ಫೋಟೊದಲ್ಲಿ ಎರಡೂ ಜಮೀನುಗಳ ನಡುವೆ ಸರ್ವೆ ನಂ. 458 ಹಾಗೂ ಅದರ ಪೂರ್ವದ ಜಮೀನಿನ ಬಾಂದ ಕಲ್ಲು ಕಾಣುತ್ತಿದೆ ಎಂದರೆ ನಿಜ. ಆ ಎರಡೂ ಜಮೀನುಗಳ ನಡುವೆ ಇರತಕ್ಕಂತಹ ಒಡ್ಡು ಕಾಣುತ್ತದೆ ಅಲ್ಲಿ ಹಾದಿ ಇಲ್ಲ ಎಂದರೆ ಸರಿಯಲ್ಲ.

3. ಅಲ್ಲಿ ಇದ್ದಂತಹ ಹಾದಿಯನ್ನು ಪ್ರತಿಬವಾದಿಗಳು ಕೆಡವಿ ಕಬ್ಬು ಹಚ್ಚಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವುಗಳು ಯಾವತ್ತೂ ಸರ್ವೆ ನಂ. 458 ರ ಪೂರ್ವಕ್ಕೆ ವಹಿವಾಟು ಮಾಡಿಲ್ಲ , ನಾವುಗಳು ಸರ್ವೆ ನಂ. 458 ರ ಪಶ್ಚಿಮಕ್ಕೆ ಕಾಣುವ ಪಶ್ಚಿಮದ ರಸ್ತೆ ಮೂಲಕವೇ ವಹಿವಾಟು ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಬಡಿಗೇರ ಕಾಲದಿಂದಲೂ ಪೂರ್ವ ಬದಿಯ ರಸ್ತೆಯಲ್ಲಿ ಹೋಗುತ್ತಿದ್ದೆವು ಎಂದು ಹೇಳುತ್ತಾರೆ. ಸರ್ವೆ ನಂ. 458 ರ ಜಮೀನಿನಲ್ಲಿ ಯಾವುದೇ ಹಳ್ಳ ಇಲ್ಲ , ಆ ರೀತಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 458 ರ ಮಧ್ಯದಲ್ಲಿ ಹಳ್ಳ ಇದೆ ಎಂದು ತೋರಿಸಲು ಯಾವುದೇ ಫೋಟೊ ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ತಾನು ಹಾಜರ ಮಾಡಿದ ಫೋಟೊಗಳನ್ನು ಕೊಡಲಾಗಿ ಅದರಲ್ಲಿ ಹಳ್ಳ ಇರುವ ಯಾವುದೇ ಫೋಟೊ ಇಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 458 ರ ಜಮೀನಿನಲ್ಲಿ ಜವಳ (ಜೌಗು) ಇದ್ದುದ್ದರಿಂದ

ಅಲ್ಲಿ ಶಿವಲಿಂಗ ಮಾಸ್ತರ ಇವರು ಒಂದು ಪೈಪ ಹಾಕಿ ಆ ನೀರು ರಸ್ತೆಗೆ ಹೋಗಲು ಅನುಕೂಲ ಮಾಡಿದ್ದಾರೆ ಎಂದರೆ ಸಾಕ್ಷಿ ಅಲ್ಲಿ ಹಳ್ಳ ಇತ್ತು , ಆ ಹಳ್ಳದ ನೀರನ್ನು ಹೋಗಲು ಸಿಮೆಂಟ ಪೈಪ ಹಾಕಿದ್ದಾಗಿ ಹೇಳುತ್ತಾರೆ. ಅಲ್ಲಿ ಯಾವುದೇ ಹಳ್ಳ ಇಲ್ಲ , ಅಲ್ಲಿ ಇರತಕ್ಕಂತಹ ಜೌಗು ನೀರನ್ನು ಹೊರಗಡೆ ಹೊಗಲು ಸಿಮೆಂಟ ಪೈಪ ಹಾಕಿದ್ದಾರೆ ಎಂದರೆ ಸರಿಯಲ್ಲ. ಶಿವಲಿಂಗ ಮಾಸ್ತರ ತಮ್ಮ ಹೊಲದಲ್ಲಿ ಒಂದು ಬಾವಿ ತೆಗೆದಿದ್ದಾರೆ ಎಂದರೆ ಸಾಕ್ಷಿ ಅದು ಸರ್ವೆ ನಂ. 456 ಎಂದು ಹೇಳುತ್ತಾರೆ. ಅಲ್ಲಿಂದ ನೀರು ತಮ್ಮ ಹೊಲಕ್ಕೆ ತೆಗೆದುಕೊಂಡು ಬರುತ್ತಾರೆ. 1ನೇ ಪ್ರತಿವಾದಿ ತಮ್ಮ ಪೂರ್ತಿ ಜಮೀನಿನಲ್ಲಿ ಕಬ್ಬು ಬೆಳೆಯುತ್ತಾರೆ ಎಂದರೆ ಸಾಕ್ಷಿ ಹಾದಿ ಮತ್ತು ಹಳ್ಳ ಬಿಟ್ಟು ಉಳಿದ ಜಾಗದಲ್ಲಿ ಕಬ್ಬು ಬೆಳೆಯುತ್ತಾರೆ ಎಂದು ಹೇಳುತ್ತಾರೆ. ನನ್ನ ವಾದಪತ್ರದ ನಕಾಶೆಯಲ್ಲಿ ತೋರಿಸಿದಂತೆ ಅ ಬ ಕ ಡ ಯಾವುದೇ ಹಾದಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಣು ತಮ್ಮ ಹಾತ್ ನಕಾಶೆಯಲ್ಲಿ ತೋರಿಸಿದಂತೆ ಸರ್ವೆ ನಂ, 458 ರ ಪಶ್ಚಿಮಕ್ಕೆ ಅ ಬ ಕ ಡ ರಲ್ಲಿ ನಾವು ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿಯಲ. ಪ್ರತಿವಾದಿಗಳ ಹಾತ್ ನಕಾಶೆಯಲ್ಲಿ ತೋರಿಸಿದ ದಾರಿ ಬಿಟ್ಟು ಅಲ್ಲಿ ಬೇರೆ ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ.

4. ಬಾಹುಬಲಿ ಕಾಡಪ್ಪ ಚೌಗಲಾ ನನಗೆ ಖಾಸ ತಮ್ಮ , ಅವರು ತೀರಿಕೊಂಡಿರುತ್ತಾರೆ. ಬಾಹುಬಲಿ ಚೌಗಲಾ ಇವರು ನಾನು ಮಾಡಿದ ಕೇಸ ಸುಳ್ಳು ಇದೆ ಎಂದು ಹಾಗೂ ಅಲ್ಲಿ ಯಾವುದೇ ದಾರಿ ಇಲ್ಲ ಎಂದು ಮಧ್ಯಂತರ ಅರ್ಜಿಯ ಮೇಲೆ ನ್ಯಾಯಾಲಯಕ್ಕೆ ತಮ್ಮ ಪ್ರಮಾಣ ಪತ್ರ ( ಅಫಿಡೆವಿಟ್ ) ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಇದರಿಂದ ಸಿಟ್ಟಾಗಿ ಆತನ ಮೇಲೆ ಹಲ್ಲೆ ಮಾಡಿ ಆತನನ್ನು ಕೊಲೆ ಮಾಡಿದ್ದೇನ ಎಂದು ಪೋಲಿಸರು ನನ್ನ ಮೇಲೆ ಕ್ರಿಮಿನಲ್ ಕೇಸ ಹಾಕಿದ್ದರು ಎಂದರೆ ಸಾಕ್ಷಿ ಆ ಕೇಸ ಮುಗಿದಿದೆ ಎಂದು ಹೇಳುತ್ತಾರೆ. ನನ್ನ ಮೇಲೆ ಚಾರ್ಜಶೀಟ ಹಾಕಿದ್ದರು , ಆ ಕೇಸ ವಿಚಾರಣೆ ಆಯಿತು ಎಂದರೆ ಆ ಕೇಸ ವಿಚಾರಣೆ ಆಗಿ ನಾನು ಅಕ್ಯೂಟ್ ಆಗಿದ್ದೇನೆ ಎಂದು ಹೇಳುತ್ತಾರೆ. ಆ ಕ್ರಿಮಿನಲ್ ಕೇಸನಲ್ಲಿ ಸಾಕ್ಷಿಗಳಿಗೆ ಬೆದರಿಕೆ ಹಾಕಿ ರೊಕ್ಕದ ಆಮಿಷ ತೋರಿಸಿ ಸಾಕ್ಷಿ ಹೇಳದಂತೆ ಮಾಡಿದ್ದೆ ಎಂದರೆ ಸರಿಯಲ್ಲ.

5. 1ನೇ ಪ್ರತಿವಾದಿ ಶಿವಲಿಂಗ ಮಾಸ್ತರ ಇವರು ಬೋಳೆ ಸ್ವಭಾವದವರು ಹಾಗೂ ಅವರು ವಯೋವೃದ್ದರು ( 90 ವರ್ಷ) ಇರುವುರಿದಂದ ಅವರು ನಮಗೆ ಜಮೀನು ಮಾರಾಟ ಮಾಡಿ ಹೋಗಬೇಕು ಎಂದು ನಾನು ಅವರ ವಿರುದ್ಧ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 458 ರ ಪೂರ್ವದಲ್ಲಿ ನಮಗೆ ಹಾದಿ ಇದೆ ಎಂದು ಹಾಗೂ ನಾವು ವಹಿವಾಟು ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಮೇಲೆ ಮಾಡುವ ಎಲ್ಲಾ ಆರೋಪಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**